ಗಾಂಧಿ ಶತಾಬ್ದಿ ಸಂದರ್ಭದಲ್ಲಿ ಹರಿಜನ ಗಿರಿಜನರ ಪುರೋಭಿವೃದ್ಧಿ

44. ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ (ಸಿಸಿಗ).—

ಸಮಾಜ ಕಲ್ಯಾಣ ಮಂತ್ರಿಗಳು ದಯವಿಟ್ಟು ಕೆಳಕಂಡ ವಿಷಯಗಳನ್ನು ತಿಳಿಸುವರೇ:—

(a) ಗಾಂಧಿಶತಾಬ್ದಿ ಸಂದರ್ಭದಲ್ಲಿ ಹರಿಜನ ಗಿರಿಜನರ ಪುರೋಭಿವೃದ್ಧಿಗಾಗಿ ಮಾಡಿರುವ ವಿಶೇಷ ಯೋಜನೆಗಳಾವುವು, ಅವುಗಳಿಗಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರ ಒದಗಿಸಿರುವ ಹಣವೆಷ್ಟು;

(b) ಪ್ರತಿಯೊಂದು ಗ್ರಾಮದ ಹರಿಜನರಿಗೂ ಕುಡಿಯುವ ನೀರನ್ನು ಒದಗಿಸಲು ಅಂದಾಜು ಮಾಡಲಾಗಿದೆಯೆ ; ಹಾಗಾದರೆ ಎಷ್ಟು ;

(c) ಅಸ್ಪೃಶ್ಯತೆ ಅಳಿಸಲು ವಿಶೇಷ ಕಾರ್ಯಕ್ರಮ ಮಾಡಲಾಗಿದೆಯೆ ! ಹಾಗಾದರೆ ಆ ಕಾರ್ಯಕ್ರಮ ಯಾವುದು !

ಶ್ರೀ ಎ. ಎರ್. ಪಾಟೀರ್ (ಸಮಾಜ ಕಲ್ಯಾಣ ಮಂತ್ರಿಗಳು):—

(a) ಸಮಾಜ ಕಲ್ಯಾಣ ಇಲಾಖೆ ಅಂತಹ ವಿಶೇಷ ಕಾರ್ಯಕ್ರಮ ಹಾಕಿಕೊಂಡಿಲ್ಲ. 1968–69 ಮತ್ತು 69–70ನೇ ಸಾಲಿನಲ್ಲಿ ಹರಿಜನರ ಮತ್ತು ಗಿರಿಜನರ ಪುರೋಭಿವೃದ್ಧಿಗಾಗಿ ಕೆಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡು ಅವುಗಳಿಗಾಗಿ ಒದಗಿಸಿದ ಹಣವನ್ನು ಇದಕ್ಕೆ ಲಗತ್ತಿಸಿರುವ ಪಟ್ಟಿಯಲ್ಲಿ ನಮೂದಿಸಿರಾಗಿದೆ.

(b) 1968–69ರಲ್ಲಿ 40 ಮತ್ತು 69–70ರಲ್ಲಿ 54 ಕುಡಿಯುವ ನೀರಿನ ಬಾವಿಗಳನ್ನು ಒದಗಿಸಲಾಯಿತು.

ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಹರಿಜನರಿಗೆ 750 ಕುಡಿಯುವ ನೀರಿನ ಬಾವಿಗಳನ್ನು ಒದಗಿಸಲು ಅಂದಾಜು ಮಾಡಲಾಗಿದೆ.

(c) ಇದುವರೆವಿಗೂ ಜಾರಿಯಲ್ಲಿದ್ದ ಗ್ರಾಮ ಪಂಚಾಯಿತಿಗಳಿಗೆ ಬಹುಮಾನ ಕೊಡುವ ಯೋಜನೆಗೆ ಬದಲಾಗಿ ಪಬ್ಲಿಸಿಟಿ ಮತ್ತು ಪ್ರಾಪಗ್ಯಾಂಡ ಎಂಬ ಯೋಜನೆಯನ್ನು ಜಾರಿಗೆ ತರಲಾಗಿದೆ, ಈ ಯೋಜನೆಯಲ್ಲಿ ಪ್ರಚಾರ ಕಾರ್ಯಕ್ರಮಕ್ಕೆ ಬೇಕಾಗುವ ವಸ್ತುಗಳನ್ನು ಒದಗಿಸುವುದು, ಜೀತ ಮತ್ತು ಬಸವಿ ಪದ್ಧತಿಗಳ ನಿರ್ಮೂಲನೆ ನಡೆಸುವುದು, ರಾಜ್ಯದಲ್ಲಿ ಏರ್ಪಾಡಾಗುವ ವಸ್ತು ಪ್ರದರ್ಶನಗಳಲ್ಲಿ ಭಾಗವಹಿಸುವುದು.

1968-69 ಮತ್ತು 1969-70ನೇ ಇಸವಿಯಲ್ಲಿ ಹರಿಜನ ಮತ್ತು ಗಿರಿಜನರ ಪುರೋಭಿವೃದ್ಧಿಗಾಗಿ ಸಮಾಜಕಲ್ಯಾಣ ಇಲಾಖೆಯಿಂದ ಕೈಗೊಂಡ ಕಾರ್ಯಕ್ರಮಗಳು

1968-69 ನಿಮ್ನ ವರ್ಗ

ಲಕ್ಷ ರೂಪಾಯಿಗಳಲ್ಲಿ

ಕ್ರಮ ಸಂಖ್ಯೆ	ಯೋಜನೆಗಳು	ನಿಮ್ನ ಪಂಗಡ											
		ರಾಜ್ಯ ಸರ್ಕಾರದ ಯೋಜನೆ	ಕೇಂದ್ರ ಪುರಸ್ಕೃತ ಯೋಜನೆ	ಯೋಜನೇತರ	ರಾಜ್ಯ ಸರ್ಕಾರದ ಯೋಜನೆ	ಕೇಂದ್ರ ಪುರಸ್ಕೃತ ಯೋಜನೆ	ಯೋಜನೇತರ	ರಾಜ್ಯ ಸರ್ಕಾರದ ಯೋಜನೆ	ಕೇಂದ್ರ ಪುರಸ್ಕೃತ ಯೋಜನೆ	ಯೋಜನೇತರ	ರಾಜ್ಯ ಸರ್ಕಾರದ ಯೋಜನೆ	ಕೇಂದ್ರ ಪುರಸ್ಕೃತ ಯೋಜನೆ	ಯೋಜನೇತರ
1	ವಿದ್ಯಾಭ್ಯಾಸಕ್ಕಾಗಿ	28.28	17.35	---	21.43	5.50		3.705	1.50		4.07	0.75	
2	ಆರ್ಥಿಕಾಭಿವೃದ್ಧಿಗಾಗಿ	5.03	...		10.95	...		2.25	4.40		2.295	4.75	
3	ಆರೋಗ್ಯ ವನತಿ ನಿರ್ಮಾಣ ಮತ್ತು ಇತರೆ ಕಾರ್ಯಕ್ರಮಗಳಿಗಾಗಿ	6.25	0.75	7.18		1.00		1.37			0.96		
4	ಪಾಠಶಾಲೆ ಮತ್ತು ಹಾಸ್ಟಲುಗಳಿಗಾಗಿ ಮತ್ತು ಗಿರಿಜನರ ಶಿಶುವಿಹಾರಗಳು			55.297			78.014			8.591			12.288
5	ಹರಿಜನ ಗಿರಿಜನರ ಪೋಸ್ಟ್ ಮೆಟ್ರಿಕ್ ಸ್ಕಾಲರ್‌ಷಿಪ್‌ಗಾಗಿ (ಇದರಲ್ಲಿ ಹರಿಜನ ಮತ್ತು ಗಿರಿಜನರಿಗಾಗಿಯೇ ಪ್ರತ್ಯೇಕ ಯೋಜನೆಗಳಿಲ್ಲ.)			9·125			14.950						
6	ಶಿಶುವಿಹಾರಕ್ಕಾಗಿ			18.278			20.700						
7	ಹೊಲಗೆ ಶಿಕ್ಷಣ ಕೇಂದ್ರಕ್ಕಾಗಿ			5.925			7.610						
8	ಸಾರ್ವಜನಿಕ ಆರೋಗ್ಯ (ಗಿರಿಜನರಿಗೆ ಮಾತ್ರ)									1.214			1.50
	ಒಟ್ಟು	...	39.56	18.10	88.625	39.56	6.50	121.274	7.325	5.90	9.805	7.325	5.50	13.788